ಕರ್ನಾಟಕ ವಿಧಾನಸಭೆ
(ಹನ್ನೆರಡನೇ ವಿಧಾನಸಭೆ)
ಬುಧವಾರ 09ನೇ ಜೂನ್ 2004ರಂದು
ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 10 ಗಂಟೆಗೆ ಸಮಾವೇಶಗೊಂಡಿತು
ಹಂಗಾಮಿ ಅಧ್ಯಕ್ಷರು: (ಶ್ರೀ ಆರ್.ವಿ. ದೇಶಪಾಂಡೆ)
ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು

ಹಂಗಾಮಿ ಅಧ್ಯಕ್ಷರು:– ಗೌರವಾನ್ವಿತ ಮಾನ್ಯ ಮುಖ್ಯಮಂತ್ರಿಗಳೇ, ಮಾನ್ಯ ಉಪ ಮುಖ್ಯಮಂತ್ರಿಗಳೇ, ಗೌರವಾನ್ವಿತ ಮಂತ್ರಿಮಂಡಲದ ಸದಸ್ಯರೇ, ಬಿ.ಜೆ.ಪಿ. ಶಾಸಕಾಂಗ ಪಕ್ಷದ ನಾಯಕರಾದ ಮಾನ್ಯ ಯಡಿಯೂರಪ್ಪನವರೇ, ಗೌರವಾನ್ವಿತ ಸದಸ್ಯರುಗಳೇ, ವಿಶ್ವದ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಭಾರತದ ಪ್ರಜಾಪ್ರಭುತ್ವ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಈ ವೈಶಿಷ್ಟ್ಯಪೂರ್ಣ ವ್ಯವಸ್ಥೆಯಲ್ಲಿ ಜನಪ್ರತಿನಿಧಿಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಈ ಮಹತ್ವದ ಪಾತ್ರವನ್ನು ನಿರ್ವಹಿಸುವ ಪ್ರಾರಂಭದಲ್ಲಿ ಸಮಾಜದ ಏಳಿಗೆ ಮತ್ತು ಪ್ರಗತಿಗಾಗಿ ಸಂವಿಧಾನ ರೀತ್ಯಾ ಜನಪ್ರತಿನಿಧಿಗಳು ಪ್ರಮಾಣ ವಚನ ಸ್ವೀಕರಿಸುತ್ತಾರೆ. ಇಂತಹ ವೈಶಿಷ್ಟ್ಯಪೂರ್ಣ ಪ್ರಮಾಣ ವಚನ ಮುಗಿಸುವ ಗುರುತರವಾದ ಜವಾಬ್ದಾರಿಯನ್ನು ಗೌರವಾನ್ವಿತ ರಾಜ್ಯಪಾಲರು ನನ್ನ ಪಾಲಿಗೆ ವಹಿಸಿರುತ್ತಾರೆ. ಇದಕ್ಕೆ ಅನುಗುಣವಾಗಿ ನಾವೆಲ್ಲರೂ ಪ್ರಾಮಾಣಿಕವಾಗಿ ಶ್ರದ್ಧೆ ಮತ್ತು ನಿಷ್ಠೆಯಿಂದ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸೋಣ ಎಂದು ನಿಮ್ಮಗಳಲ್ಲಿ ಆಶಿಸುತ್ತೇನೆ. ನೂತನವಾಗಿ ವಿಧಾನಸಭೆಗೆ ಆಯ್ಕೆಯಾದ ತಮಗೆ ನನ್ನ ಹೃದಯಪೂರ್ವಕ ಅಭಿನಂದನೆಗಳು. ಈಗ ಒಂದು ಪ್ರಕಟಣೆ.

1. ಪ್ರಕಟಣೆ
ವಿಷಯ:– ಅಧ್ಯಕ್ಷರ ನಾಮನಿರ್ದೇಶನ

ಹಂಗಾಮಿ ಅಧ್ಯಕ್ಷರು:– ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ 9ನೇ ನಿಯಮದ ಮೇರೆಗೆ ಈ ಕೆಳಗಿನ ಸದಸ್ಯರುಗಳನ್ನು ಪ್ರಸ್ತುತ ಅಧಿವೇಶನ ಸಮಯದಲ್ಲಿ ನನ್ನ ಗೈರು ಹಾಜರಿಯಲ್ಲಿ ಸಭೆಯಲ್ಲಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವಂತೆ ನಾನು ನಾಮನಿರ್ದೇಶನ ಮಾಡುತ್ತೇನೆ.

1. ಶ್ರೀ ಅಂಜನಮೂರ್ತಿ
2. ಶ್ರೀ ಅರಗ ಜ್ಞಾನೇಂದ್ರ
3. ಶ್ರೀ ಬಿ.ಆರ್. ಪಾಟೀಲ್
4. ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ

2. ಸದಸ್ಯರಾದ ಪ್ರಮಾಣ ವಚನ ಅಥವಾ ಪ್ರತಿಜ್ಞಾ ವಚನ ಸ್ವೀಕಾರ

ಹಂಗಾಮಿ ಅಧ್ಯಕ್ಷರು:– ಈಗ ಪ್ರಮಾಣ ವಚನ ಕಾರ್ಯಕ್ರಮ ನಡೆಸಲು ಕಾರ್ಯದರ್ಶಿಯವರು ಮಾನ್ಯ ಸದಸ್ಯರುಗಳ ಹೆಸರುಗಳನ್ನು ಕರೆಯುವ ಮೂಲಕ ಪ್ರಾರಂಭಿಸಬೇಕೆಂದು ಹೇಳುತ್ತೇನೆ.

XXX XXX XXX

ಹಂಗಾಮಿ ಅಧ್ಯಕ್ಷರು:– ಒಂದು ನಿಮಿಷ ಕೇಳಿ. ಈಗ ಶಾಸನಸಭೆ ಕಾರ್ಯಕ್ರಮವನ್ನು ನಾವು ಪ್ರಾರಂಭ ಮಾಡಿದ ನಂತರ ಯಾರೇ ಒಬ್ಬರು ಗೌರವಾನ್ವಿತ ಸದಸ್ಯರು ಮಾತನಾಡಬೇಕಾದರೆ ಮೊದಲು ಅವರು ಪ್ರಮಾಣವಚನ ತೆಗೆದುಕೊಳ್ಳಬೇಕು. ಪ್ರಮಾಣ ವಚನ ತೆಗೆದುಕೊಳ್ಳದೆ ತಾವು ಏನೇ ಮಾತನಾಡಿದರೂ ಸಹ ಅದು ದಾಖಲೆಗೆ ಹೋಗುವುದಿಲ್ಲ, ಹಾಗಾಗಿ ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ತಮ್ಮ ವಿಚಾರವನ್ನು ತಾವು ಹೇಳಿದ್ದೀರಿ. ತಾವು ದಯವಿಟ್ಟು ಸಹಕರಿಸಬೇಕು. ಪ್ರಮಾಣವಚನ ಆದನಂತರ ತಾವು ಮಾತನಾಡಬಹುದು.

XXX XXX XXX

ಹಂಗಾಮಿ ಅಧ್ಯಕ್ಷರು:– ಸಂವಿಧಾನ ಪ್ರಕಾರ ಕೆಲಸ ನಡೆಯಬೇಕಲ್ಲ?

XXX XXX XXX

ಹಂಗಾಮಿ ಅಧ್ಯಕ್ಷರು:– ಈಗ ತಾವು ದಯಮಾಡಿ ಕುಳಿತುಕೊಳ್ಳಿ. ಕಾರ್ಯಕ್ರಮವನ್ನು ಶುರುಮಾಡೋಣ. ಈಗ ತಾವು ಹಿರಿಯ ಸದಸ್ಯರು ಮತ್ತು ಸಂವಿಧಾನದ ಪರಿಚಯ ಎಲ್ಲರಿಗಿಂತಲೂ ತಮಗೆ ಹೆಚ್ಚು ಇದೆ. ದಯಮಾಡಿ ತಾವು ಸಹಕರಿಸಬೇಕೆಂದು ವಿನಂತಿ.

XXX XXX XXX

ಹಂಗಾಮಿ ಅಧ್ಯಕ್ಷರು:– ಈಗ ಕಾರ್ಯದರ್ಶಿಯವರೇ, ಶುರುಮಾಡಿ. Nothing will go on record. ಏನೂ ರೆಕಾರ್ಡ್‌ಗೆ ಹೋಗುವುದಿಲ್ಲ. ಕಾರ್ಯದರ್ಶಿಯವರೇ ಪ್ರಾರಂಭ ಮಾಡಿ.

ಶ್ರೀ ಟಿ. ರಾಜಣ್ಣ (ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ):– ಸನ್ಮಾನ್ಯ ಸಭಾಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಈಗ ಪ್ರಮಾಣ ವಚನ ಕಾರ್ಯಕ್ರಮವನ್ನು ಪ್ರಾರಂಭ ಮಾಡಲಾಗುವುದು. ಪ್ರಪ್ರಥಮವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಧರ್ಮಸಿಂಗ್ ಅವರು.

XXX XXX XXX

ಶ್ರೀ ಧರ್ಮಸಿಂಗ್ (ಜೇವರ್ಗಿ) ಎಂಬ ಹೆಸರಿನವನಾದ ನಾನು ವಿಧಾನ ಸಭೆಯ ಸದಸ್ಯನಾಗಿ ನಿರ್ವಾಚನ ಹೊಂದಿದವನಾಗಿ ವಿಧಿದ್ವಾರಾ ಸ್ಥಾಪಿತವಾದ ಭಾರತದ ಸಂವಿಧಾನದ ವಿಷಯದಲ್ಲಿ ಶ್ರದ್ಧೆಯಿಂದಲೂ, ನಿಷ್ಠೆಯಿಂದಲೂ ಕೂಡಿರುತ್ತೇನೆಂದೂ, ನಾನು ಭಾರತದ ಪರಮಾಧಿಕಾರವನ್ನು ಮತ್ತು ಸಮಗ್ರತೆಯನ್ನು ಸಮರ್ಥಿಸುತ್ತೇನೆಂದೂ, ನಾನು ಈಗ ಕೈಗೊಳ್ಳಲಿರುವ ಕರ್ತವ್ಯವನ್ನು ಶ್ರದ್ಧಾಪೂರ್ವಕವಾಗಿ ನಿರ್ವಹಿಸುತ್ತೇನೆಂದೂ **ಭಗವಂತನ ಹೆಸರಿನ ಮೇಲೆ ಪ್ರಮಾಣ ಮಾಡುತ್ತೇನೆ.** (ನಂತರ ಈ ಕೆಳಕಂಡ ಮಾನ್ಯ ಸದಸ್ಯರುಗಳು ಕನ್ನಡ:ಇತರ ಭಾಷೆಗಳಲ್ಲಿ ಭಗವಂತನ ಹೆಸರಿನ ಮೇಲೆ ಪ್ರಮಾಣ / ಸತ್ಯ ನಿಷ್ಠೆಯಿಂದ ಪ್ರತಿಜ್ಞೆ ಮಾಡಿದರು)

XXX ಮಾನ್ಯ ಹಂಗಾಮಿ ಅಧ್ಯಕ್ಷರ ಆದೇಶದ ಮೇರೆಗೆ ದಾಖಲು ಮಾಡಿರುವುದಿಲ್ಲ.

ಸದಸ್ಯರ ಹೆಸರು	ಕ್ಷೇತ್ರ	ಪ್ರಮಾಣ ವಚನ ಸ್ವೀಕರಿಸಿದ ಭಾಷೆ
ಶ್ರೀ ಬಿ.ಎಸ್. ಯಡಿಯೂರಪ್ಪ	ಶಿಕಾರಿಪುರ	ಕನ್ನಡ
ಶ್ರೀ ಸಿದ್ಧರಾಮಯ್ಯ	ಚಾಮುಂಡೇಶ್ವರಿ	ಕನ್ನಡ
ಶ್ರೀ ಮಲ್ಲಿಕಾರ್ಜುನ ಖರ್ಗೆ	ಗುರುಮಿಟ್ಕಲ್	ಕನ್ನಡ
ಶ್ರೀ ಪಿ.ಜಿ.ಆರ್. ಸಿಂಧ್ಯಾ	ಕನಕಪುರ	ಕನ್ನಡ
ಶ್ರೀ ಎಂ.ಪಿ. ಪ್ರಕಾಶ್	ಹಡಗಲಿ	ಕನ್ನಡ
ಶ್ರೀ ಡಿ. ಮಂಜುನಾಥ್	ಹಿರಿಯೂರು	ಕನ್ನಡ
ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ	ಸದಲಗ	ಕನ್ನಡ
ಶ್ರೀ ಎಸ್.ಎಂ. ಕೃಷ್ಣ	ಚಾಮರಾಜಪೇಟೆ	ಕನ್ನಡ
ಶ್ರೀ ಎಸ್.ಆರ್. ಮೋರೆ	ಧಾರವಾಡ	ಕನ್ನಡ
ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ	ಕೋಲಾರ	ಕನ್ನಡ
ಶ್ರೀ ಹೆಚ್.ಡಿ. ರೇವಣ್ಣ	ಹೊಳೆನರಸೀಪುರ	ಕನ್ನಡ
ಶ್ರೀ ಮಿರಾಜುದ್ದೀನ್ ಪಟೇಲ್	ಹುಮ್ನಾಬಾದ್	ಕನ್ನಡ
ಶ್ರೀ ತನ್ವೀರ್ ಸೇಠ್	ನರಸಿಂಹರಾಜ	ಕನ್ನಡ
ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ	ಬ್ರಹ್ಮಾವರ	ಕನ್ನಡ
ಶ್ರೀ ಅರಗಜ್ಞಾನೇಂದ್ರ	ತೀರ್ಥಹಳ್ಳಿ	ಕನ್ನಡ
ಶ್ರೀ ಅಂಜನಾಮೂರ್ತಿ	ನೆಲಮಂಗಲ	ಕನ್ನಡ
ಶ್ರೀ ಅಲ್ಕೋಡ್ ಹನುಮಂತಪ್ಪ	ದೇವದುರ್ಗ	ಕನ್ನಡ
ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ	ಲಿಂಗಸಗೂರು	ಕನ್ನಡ
ಶ್ರೀ ವಾಟಾಳ್ ನಾಗರಾಜ್	ಚಾಮರಾಜನಗರ	ಕನ್ನಡ
ಶ್ರೀ ಜೆ.ಸಿ. ಮಾಧುಸ್ವಾಮಿ	ಚಿಕ್ಕನಾಯಕನಹಳ್ಳಿ	ಕನ್ನಡ
	11.00 ಪಿಎಂ	
ಶ್ರೀ ಜಿ.ವಿ. ಶ್ರೀರಾಮರೆಡ್ಡಿ	ಬಾಗೇಪಲ್ಲಿ	ಕನ್ನಡ
ಶ್ರೀ ನರಸಿಂಹನಾಯಕ್	ಶೋರಾಪುರ	ಕನ್ನಡ
ಶ್ರೀ ಅನಿಲ್ ಹೆಚ್. ಲಾಡ್	ಕೂಡ್ಲಗಿ	ಕನ್ನಡ
ಶ್ರೀ ಕೆ.ಆರ್. ರಮೇಶ್ ಕುಮಾರ್	ಶ್ರೀನಿವಾಸಪುರ	ಕನ್ನಡ
ಶ್ರೀ ಹೆಚ್. ಆಂಜನೇಯ	ಭರಮಸಾಗರ	ಕನ್ನಡ
ಶ್ರೀ ಎಸ್. ಅಂಗಾರ	ಸುಳ್ಯ	ಕನ್ನಡ
ಶ್ರೀ ಕೆ. ಅಭಯಚಂದ್ರ	ಮೂಡಬಿದರೆ	ಕನ್ನಡ
ಶ್ರೀ ಅಕ್ಕಿಮಲ್ಲಿಕಾರ್ಜುನ ಸಹದೇವಪ್ಪ	ಕುಂದಗೋಳ್	ಕನ್ನಡ
ಶ್ರೀ ಅಭಯ ಪಾಟೀಲ್	ಬಾಗೇವಾಡಿ	ಕನ್ನಡ

ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡರ		
ಶ್ರೀ ಅಪ್ಪಾಸಾಹೇಬ್ (ಅಪ್ಪು)	ಮುದ್ದೇಬಿಹಾಳ್	ಕನ್ನಡ
ಮಲ್ಲಪ್ಪ ಪಟ್ಟಣಶೆಟ್ಟಿ	ಬಿಜಾಪುರ	ಕನ್ನಡ
ಶ್ರೀ ಅಶೋಕ್ ಗುರಪ್ಪ ಹಬಾಡಿ	ಸಿಂಧಗಿ	ಕನ್ನಡ
ಶ್ರೀ ಬಾದರ್ಲಿ ಹಂಪನಗೌಡ	ಸಿಂಧನೂರ್	ಕನ್ನಡ
ಶ್ರೀ ಹೆಚ್.ಸಿ. ಬಾಲಕೃಷ್ಣ	ಮಾಗಡಿ	ಕನ್ನಡ
ಶ್ರೀ ಎಸ್. ಬಾಲರಾಜ್	ಕೊಳ್ಳೆಗಾಲ	ಕನ್ನಡ
ಶ್ರೀ ಬಂಡೆಪ್ಪ ಕಾಶ್ಯಂಪುರ್	ಬೀದರ್	ಕನ್ನಡ
ಶ್ರೀ ಜಿ. ಬಸವಣ್ಣಪ್ಪ	ಹೊಳೆಹೊನ್ನೂರು	ಕನ್ನಡ
ಶ್ರೀ ಬಸವರಾಜ್ ಭೀಮಣ್ಣ ಹಿಟ್ನಾಳ್ ಕೆ	ಕೊಪ್ಪಳ್	ಕನ್ನಡ
ಶ್ರೀ ಬಸವರಾಜ ರಾಯರೆಡ್ಡಿ	ಯಲಬುರ್ಗಾ	ಕನ್ನಡ
ಶ್ರೀ ಎ.ಎಸ್. ಬಸವರಾಜ್	ಅರಸೀಕೆರೆ	ಕನ್ನಡ
ಶ್ರೀ ಹೆಚ್.ಡಿ. ಬಸವರಾಜ್	ವೀರರಾಜ್ ಪೇಟೆ	ಕನ್ನಡ
ಶ್ರೀಮತಿ ಭಾಗೀರಥಿ ಟಿ.	ಕೊಟ್ಟೂರು	ಕನ್ನಡ
ಶ್ರೀ ಭರಮನಗೌಡ (ರಾಜು) ಅಲಗೌಡ ಕಾಗೆ	ಕಾಗವಾಡ	ಕನ್ನಡ
ಶ್ರೀ ಭೋಪಯ್ಯ ಕೆ.ಜಿ.	ಮಡಿಕೇರಿ	ಕನ್ನಡ
ಶ್ರೀ ಭೋಸ್‌ರಾಜ್ ಎನ್.ಎಸ್.	ಮಾನ್ವಿ	ಕನ್ನಡ
ಶ್ರೀ ಎನ್. ಚೆಲುವರಾಯಸ್ವಾಮಿ (ಸ್ವಾಮಿಗೌಡ)	ನಾಗಮಂಗಲ	ಕನ್ನಡ
ಶ್ರೀ ಎಸ್. ರಾಜೇಂದ್ರನ್	ಕೆ.ಜಿ.ಎಫ್.	ಆಂಗ್ಲ

3. ಪ್ರಮಾಣವಚನ ಸ್ವೀಕಾರದ ಬಗ್ಗೆ ಆಕ್ಷೇಪಣೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕನ್ನಡ ಚೆನ್ನಾಗಿ ಮಾತನಾಡುತ್ತಾರೆ. ಅವರು ಇಂಗ್ಲೀಷ್‌ನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡುವುದು ಸರಿಯಲ್ಲ. ಇದು ಯಾವ ರಾಜ್ಯ? ನಾವು ಯಾವ ರಾಜ್ಯದಲ್ಲಿದ್ದೇವೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಕರ್ನಾಟಕ ರಾಜ್ಯದಲ್ಲಿ ಕನ್ನಡ ಆಡಳಿತ ಭಾಷೆ. ಇನ್ನು ಅವರು ಅರ್ಥ ಮಾಡಿಕೊಳ್ಳಬೇಕು. ನನ್ನ ಸ್ನೇಹಿತರು ಅವರು. ಕನ್ನಡ ಚೆನ್ನಾಗಿ ಮಾತನಾಡುತ್ತಾರೆ. ಇದು ಸರಿಯಲ್ಲ. ನಿಜವಾಗಿಯೂ ಇದು ಅಗೌರವ. ರಾಜ್ಯಕ್ಕೆ ಇದು ಒಳ್ಳೆಯ ಸೂಚನೆಯಲ್ಲ.

ಹಂಗಾಮಿ ಅಧ್ಯಕ್ಷರು:– ತಾವು ಹೇಳುವುದು ನಿಜ. ಕನ್ನಡ ಭಾಷೆ ಬಗ್ಗೆ ಅಭಿಮಾನ ಇರಬೇಕು. ನಾಡಿನ ಬಗ್ಗೆ ಅಭಿಮಾನ ಇರಬೇಕು. ಕನ್ನಡ ಭಾಷೆಯಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದರೆ ಒಳ್ಳೆಯದು ಎಂದು ವಿನಂತಿ ಮಾಡಿಕೊಂಡಿದ್ದೇನೆ. ಆದರೆ ಕಾನೂನು ಪ್ರಕಾರ